# ಸೃಜನ



*By: LITTLE KITES*

*S.S.H.S.S.KATUKUKKE*

# ಕ್ರಾಂತಿ ವೀರ ಭಗತ್ ಸಿಂಗ್



ಭಗತ್ ಸಿಂಗ್ ರವರು ಭಾರತ ಸ್ವಾತಂತ್ರ್ಯಸಂಗ್ರಾಮದ ಕ್ರಾಂತಿಕಾರ ಮತ್ತು ಸ್ವಾತಂತ್ರ್ಯ ಹೋರಾಟಗಾರ.ಇವರು 1907 ರಲ್ಲಿ ಜರನವಾಲಾ ತಾಲೂಕಿನ ಬಂಗಾ ಎಂಬ ಹಳ್ಳಿಯಲ್ಲಿ ಜನಿಸಿದರು.ತಾಯಿ ವಿದ್ಯಾವತಿ ಮತ್ತು ತಂದೆ ಕಿಶನ್ ಸಿಂಗ್ ರವರ ಏಕೈಕ ಪುತ್ರ.ಜಲಿಯನ್ ವಾಲಬಾಗ್ ನಲ್ಲಿ ಬ್ರಿಟೀಷರು ನಡೆಸಿದ ಮರಣಹೋಮದಿಂದುಂಟಾದ ರಕ್ತದ ಕೆಂಪು ಕಲೆ ಅವರಲ್ಲಿ ಸ್ವಾತಂತ್ರ್ಯಹೋರಾಟದ ಕಿಚ್ಚನ್ನು ಹಬ್ಬಿಸಿ ಮನಸ್ಸಿನಲ್ಲಿ ಹೋರಾಟದ ಚಿತ್ತಾರ ಮೂಡಿಸಿತು.ಪಂಜಾಬಿನ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ನಿರತರಾಗಿದ್ದರು.ಪುರಾತನ ವ್ಯವಸ್ಥೆಯನ್ನು ನಾಶಮಾಡದೆ ಹೊಸಬದಲಾವಣೆಯನ್ನು ತರುವುದು ಸಾಧ್ಯವಿಲ್ಲ ಎಂದು ಭಗತ್ ಸಿಂಗ್ ರವರಿಗೆ ಮನವರಿಕೆಯಾಯಿತು.ಆದರೆ ಪ್ರತಿಭಟನೆಯ ದಿವ್ಯಜ್ಯೋತಿ ಆರದಂತೆ ಉರಿಯಲು ತನ್ನಂಥವರು ಸಾಯಲೇಬೇಕೆಂದು  ಭಗತ್ ನಂಬಿದ್ದ. ಮಾರ್ಚ್ 23 1981 ರಂದು ಇವರನ್ನು ಬ್ರಿಟೀಷ್ ಸರಕಾರವು ಗಲ್ಲಿಗೇರಿಸಿತು.ಭಗತ್ ಸಿಂಗ್ ಸಂಪೂರ್ಣ ನಾಸ್ತಿಕ ಮತ್ತು ಜಾತಿ ವಿರೋಧಿಯಾಗಿದ್ದರು.ಸಾಯುವ ಕೆಲವೇ ನಿಮಿಷಗಳ ಮೊದಲು ಪ್ರಾರ್ಥನೆಯಂತೆ ಭಗತ್ ನುಡಿದ ಮಾತುಗಳು ಎಂಥವರನ್ನೂ ಕೆಚ್ಚೆದೆಯ ಉತ್ತುಂಗಕ್ಕೇರಿಸ ಬಲ್ಲವು."ಮೊದಲು ವೈಯುಕ್ತಿಕತೆಯನ್ನು ನುಚ್ಚುಚೂರು ಮಾಡಿ ,ವೈಯಕ್ತಿಕ ಸುಖದ ಕನಸನ್ನು ಭಗ್ನಗೊಳಿಸಿ, ನಂತರ ಕೆಲಸ ಮಾಡಲು ತೊಡಗಿ, ನೀವು ಒಂದೊಂದೇ ಅಂಗುಲ ಮುಂದಕ್ಕೆ ಸಾಗಬೇಕು. ಅದಕ್ಕೆ ಧೈರ್ಯ ಬೇಕು; ಧೃಢ ನಿರ್ಧಾರಬೇಕು ;ನಿರಂತರ ಪರಿಶ್ರಮ ಬೇಕು. ಯಾವ ಕಷ್ಟ ಕಾರ್ಪಣ್ಯಗಳೂ ನಿರಾಶೆಗೊಳಿಸುವುದಿಲ್ಲ.ಯಾವ ವೈಫಲ್ಯಗಳೂ ನಿಮ್ಮನ್ನು ಕಂಗೆಡಿಸುವುದಿಲ್ಲ.ತ್ಯಾಗ ಮತ್ತು ನರಳಾಟಗಳ ಅಗ್ನಿದಿವ್ಯವನ್ನು ಹಾದು ನೀವು ವಿಜಯಶಾಲಿಗಳಾಗುತ್ತೀರಿ.ಈ ವೈಯಕ್ತಿಕ ಗೆಲುವುಗಳು ಕ್ರಾಂತಿಯ ಬಹುದೊಡ್ಡ ಆಸ್ತಿ. ಇವರು ನಮ್ಮ ಭಾರತದ ಆಸ್ತಿ........

ಇತೀ    ಶ್ರಾವಣ್ಯ

## ಮಹಾತ್ಮ ಗಾಂಧೀಜಿ

ಮಹಾತ್ಮರಾದ ಇವರು ಗುಜರಾತಿನ
ಪೋರ್ ಬಂದರ್ ನಲ್ಲಿ ಜನಿಸಿದರು
ಬಡವರ ಮನದಾಳದ ಕಷ್ಟವನರಿತು
ತನ್ನ ಸಿರಿವಂತಿಕೆಯನ್ನು ತ್ಯಜಿಸಿದರು

ಅಹಿಂಸೆಯೆಂಬ ತತ್ವದಡಿಯಲ್ಲಿ
ಹೋರಾಡಿದರು ನ್ಯಾಯದಡಿಯಲಿ
ಯುವ ಜನರೆಲ್ಲಾ ಒಗ್ಗೂಡಿಸಿ
ಹುರಿದುಂಬಿಸಿದರು ಮನಸಿನಲಿ

ಸ್ವಾತಂತ್ರ್ಯದ ಹಕ್ಕಿಗೋಸ್ಕರ
ಜೀವನವನ್ನೇ ತೆತ್ತರು
ಬಿಳಿಯರೊಂದಿಗೆ ಜಗಳದಲಿ
ಹರಿಯಬಾರದೆಂದರು ನೆತ್ತರು

ಪರಂಗಿಗಳ ಶೋಷಣೆಗೆದುರಾಗಿ
ದಂಡಿಯಾತ್ರೆಯನು ಕೈಗೊಂಡರು
ಉಪ್ಪು ಸತ್ಯಾಗ್ರಹದ ಕೊನೆಯಂಚಿನಲಿ
ಗುಂಡಿಕ್ಕಿದರು ಬ್ರಿಟೀಷರು

ಸ್ವಾಭಿಮಾನದ ಸಂಪತ್ತು
ಅಮೂಲ್ಯವಾದ ಈ ಮುತ್ತು
ಸ್ವಾತಂತ್ರ್ಯವನ್ನು ಕೈಗಿತ್ತು
ನಮ್ಮನಗಲಿದ್ದು ಜನವರಿ ಮೂವತ್ತು

ಎಷ್ಟೇ ಕಷ್ಟ ಬಂದರೂ ಧೈರ್ಯದಿಂದಲೇ
ಹಿಂಸೆಯ ಮಾಡದೆ ಮುನ್ನಡೆದರಿವರು
ಅಂತರ್ಜಾಲಕೆ ಅರ್ಪಿತರಾದ ಇಂದಿನ
ಯುವಕರಿಗೆಲ್ಲ ಮಾದರಿಯಿವರು

(ಸಂಗ್ರಹ)

ಭಾಗ್ಯಶ್ರೀ ಮತ್ತು ದೀಕ್ಷಾ



# ಕನಸು ನನಸು ಮಾಡದ ಅಪ್ಪ

ಗಟ್ಟಿ ಶರೀರದ ,ದಪ್ಪ ,ತೋಳಿನ ಸಿಟ್ಟಿನ ಕಣ್ಣಿನ,ಕಲ್ಲು ಮನಸ್ಸಿನ,ಯಾವಾಗಲೂ ಬಯ್ಯುವ ,ಕಡಿಮೆ ಮಾತಿನ, ಚಿಕ್ಕ ವಿಷಯಕ್ಕೂ ಬೊಬ್ಬಿಡುವ ,ಅಮ್ಮನಂತೆ ಮೃದು ಮಾತನಾಡದ ,ಅಂಕೆಗಳ ಬಗ್ಗೆ ಹೊಗಳದೆ ತೆಗಳದೆ, ಮಗಳ ಪರೀಕ್ಷೆಯ ಬಗ್ಗೆ ಕಿಂಚಿತ್ತೂ ಆಲೋಚಿಸದ ,ಬೆಳಗ್ಗೆ ಬೇಗನೆ ಎದ್ದು ಸಾವಿರಾರು ಕೆಲಸಗಳನ್ನು ಪೂರೈಸುವ ರಾತ್ರಿ ತಡವಾಗಿ ಬಂದರೂ ಮತ್ತೂ  ಮನೆಯ ಕೆಲಸಗಳನ್ನು ಪೂರೈಸುವ / ಮಾಡುವ ಅಪ್ಪ ಗಂಗಾಧರನ ಮೇಲೆ ಮಗಳು ಶಾಂತಿಗೆ ಸಿಟ್ಟು. ನನಗಾಗಿ ಒಂದೈದು ನಿಮಿಷ ಮೀಸಲಿಡಲು ಅವರಿಂದ ಸಾಧ್ಯವಾಗುವುದಿಲ್ಲ ಎಂಬ ಕೊರಗು.

ಆ ಕಲ್ಲು ಮನಸ್ಸಿನ ಹಿಂದೆ ಮೃದುತನ ಇದೆ ಎಂಬುವುದನ್ನು ಆಂತರ್ಯ ಹೇಳಬಹುದಷ್ಟೇ.

ಒಂದು ದಿನ ಮಗಳನ್ನು ಎಳೆವಯಸ್ಸಿನಲ್ಲೇ ಕಾಲನು ಪರಲೋಕಕ್ಕೆ ಕರೆದನು.

**ಆಗ ಅಪ್ಪನಿಗೆ ಪಶ್ಚಾತ್ತಾಪವಾಯಿತು.**



# ಕೋಗಿಲೆ

ಕೋಗಿಲೆ ಓ ನನ್ನ ಕೋಗಿಲೆ
ಕುಹೂ ಕುಹೂ ಗಾನದ ಕೋಗಿಲೆ
ಇಂಪಾದ ಆ ಸ್ವರಮಾಲೆ
ದೇವನು ನೀಡಿದ ಕಲೆ

ಹಾರುತಾ ಹೋಗುವೆ ಬಾನಲ್ಲಿ
ಇನಿದನಿ ಮೂಡಿಸುವ ಸ್ವರದಲ್ಲಿ
ಸಂತಸವ ತುಂಬಿರುವೆ ಕಣ್ಣಲ್ಲಿ
ನೀ ಆನಂದ ನೀವೆ ಮನದಲ್ಲಿ

ನಿನ್ನಯ ಕುಹೂ ಕುಹೂ ಗಾನ
ತಣಿಸಿತು ನನ್ನಯ ಮನ
ಸದಾ ಕೇಳ ಬೇಕೆನಿಸುವೆನು
ನಿನ್ನಯ ಸುಮಧುರ ಗಾನ____________________.

ಸಂಗ್ರಹ

DHANUSH,PREETHAM

## <u>ತ್ಯಾಜ್ಯ ನಿರ್ವಹಣೆ - ಸಮಸ್ಯೆಗಳು - ಪರಿಹಾರಗಳು</u>

<u>ಪೀಠಿಕೆ:</u>




ಭಾರತ ಮುಂದುವರಿಯುತ್ತಿರುವ ರಾಷ್ಟ್ರ. ಈ ಮುಂದುವರಿಯುತ್ತಿರುವ ದೇಶದಲ್ಲಿ ಹಲವಾರು ಸಮಸ್ಯೆಗಳಿವೆ. ಅದಕ್ಕೆ ತಕ್ಕಂತೆ ಬಹಳಷ್ಟು ಪರಿಹಾರವಗಳು ಕೂಡಾ ಇವೆ. ತ್ಯಾಜ್ಯ ನಿರ್ವಹಣೆ ಒಂದು ಬಹು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವಿದೆಯೇ ? ನೋಡೋಣ...

<u>ತ್ಯಾಜ್ಯಗಳಲ್ಲಿ ಎಷ್ಟು ವಿಧ ?</u>

ತ್ಯಾಜ್ಯಗಳಲ್ಲಿ 2 ಬಗೆಯ ತ್ಯಾಜ್ಯಗಳಿವೆ.

1. ಜೈವಿಕ ತ್ಯಾಜ್ಯ
2. ಅಜೈವಿಕ ತ್ಯಾಜ್ಯ

<u>1. ಜೈವಿಕ ತ್ಯಾಜ್ಯ:</u>

ಜೈವಿಕ ತ್ಯಾಜ್ಯಕ್ಕೆ ಉದಾ: ಕೊಳೆತ ತರಕಾರಿ ಹಣ್ಣುಗಳು..... ಜೈವಿಕ ತ್ಯಾಜ್ಯದಿಂದ ನಮಗೆ ಬಹಳಷ್ಟು ಉಪಯೋಗಗಳಿವೆ. ಈ ಕೊಳೆತ ವಸ್ತುಗಳನ್ನು ಮಣ್ಣಿಗೆ/ಮರ-ಗಿಡಗಳ ಬುಡಕ್ಕೆ ಹಾಕಿದರೆ ಅವುಗಳ ಫಲವತ್ತತೆ ಹೆಚ್ಚುವುದು. ಇನ್ನೊಂದು ಪರಿಹಾರವೂ ಇದೆ. ಅದೇನೆಂದರೆ

ಅವುಗಳನ್ನು ಗೋಬರ್ ಗ್ಯಾಸಿಗೆ ಹಾಕಿದರೆ ಒಳ್ಳೆಯ ಅಡುಗೆ ಅನಿಲ ಲಭ್ಯವಾಗುತ್ತದೆ. ಇಷ್ಟು ವಿಚಾರಗಳು ಜೈವಿಕ ತ್ಯಾಜ್ಯದ ಒಳ್ಳೆಯ ಗುಣಗಳಾಗಿವೆ.

2. ಅಜೈವಿಕ ತ್ಯಾಜ್ಯ:

ಅಜೈವಿಕ ತ್ಯಾಜ್ಯವು ಮುಂದುವರಿದ ರಾಷ್ಟ್ರಗಳಲ್ಲೂ ಪರಿಹಾರ ಸಿಗದ " ಅಕ್ಷಯ ಸಮಸ್ಯೆ" ಆಗಿದೆ. ಉದಾ: ಪ್ಲಾಸ್ಟಿಕ್ ಎಂಬುದು ಮಹಾಮಾರಿ. ಮಾನವನ ರೋಗಕ್ಕೆ ಹೋಲಿಸಿದರೆ ಕ್ಯಾನ್ಸರ್ ಗೆ ಸರಿ ಸಮಾನವಾಗಿದೆ. ಪ್ಲಾಸ್ಟಿಕ್ ಇಲ್ಲದೆ ಈಗಿನ ಕಾಲದಲ್ಲಿ ಮನುಷ್ಯನಿಲ್ಲ, ಮನುಷ್ಯನಿಲ್ಲದೆ ಪ್ಲಾಸ್ಟಿಕ್ ಇಲ್ಲ. ಪ್ಲಾಸ್ಟಿಕ್ ಮತ್ತು ಮಾನವನಿಗೆ ಅವಿನಾಭಾವ ಸಂಬಂಧ ಎಂದೂ ಹೇಳಬಹುದು. ಈ ಪ್ಲಾಸ್ಟಿಕ್ ನಿಂದ ಬಹಳಷ್ಟು ಒಳಿತು ಕೆಡುಕುಗಳಿವೆ.

ಒಳಿತುಗಳು :

1. ಬಹಳಷ್ಟು ವಸ್ತುಗಳನ್ನು ಹಾಕಿ ತರಬಹುದು.

2. ಚೀಪ್ ಗೆ ಲಭಿಸುವುದು.

3. ನೀರನ್ನು ತರಲು ಪ್ಲಾಸ್ಟಿಕ್ ಬಾಟಲಿಯ ಅಗತ್ಯವಿದೆ.

ಕೆಡುಕುಗಳು :

1. ಮಾಲಿನ್ಯ

2.ಪರಿಸರ ನಾಶ

3.ಸಾಂಕ್ರಾಮಿಕ ರೋಗಗಳು

4.ಜಲ ಮಾಲಿನ್ಯ

5.ವಾಯು ಮಾಲಿನ್ಯ

6.ಮಣ್ಣಿನ ಮಾಲಿನ್ಯ

7.ಇತರ ಮಾಲಿನ್ಯಗಳು

ಪರಿಹಾರಗಳು:

1.ಪ್ಲಾಸ್ಟಿಕ್ RECYCLE ಮಾಡುವುದು.

2.ಪ್ಲಾಸ್ಟಿಕ್ ಚೀಲಗಳನ್ನು ಬಳಸದಿರುವುದು.

3.ನಾವು ಉಪಯೋಗಿಸಿದ ಪ್ಲಾಸ್ಟಿಕನ್ನು ಕಂಡಲ್ಲಿ ಎಸೆಯುವುದು

4.ಕನಿಷ್ಠ ಪಕ್ಷ ವಾರಕ್ಕೊಮ್ಮೆಯಾದರೂ ಕಸ ಹೆಕ್ಕುವುದು.

ಉಪಸಂಹಾರ:

ಭಾರತೀಯ ಸಮಾಜದಲ್ಲಿ ಅಜೈವಿಕ ವಸ್ತುಗಳ ಪಾತ್ರ ಬಹಳ ಕಡಿಮೆಯಾಗಬೇಕು.ಇಲ್ಲದಿದ್ದರೆ ಭೂಮಿ ಮತ್ತು ಜೀವಸಂಕುಲ ನಾಶವಾಗುವುದು ನಿಶ್ಚಿತ. ದೇಶದ ಆಸ್ತಿಕ ಬಾಂಧವರಾದ ನಾವು ದೇಶದ ಕೀರ್ತಿ ಉತ್ತುಂಗಕ್ಕೇರಲು ಸ್ವಚ್ಚತೆಯ ವಿಷಯದಲ್ಲಿ ಸದಾ ಸಿದ್ಧರಿರೋಣ.ಮಹಾತ್ಮ ಗಾಂಧಿಯವರ ಕನಸನ್ನು ನನಸು ಮಾಡುವಲ್ಲಿ ನಮ್ಮ ಅಳಿಲ ಸೇವೆ ಮಹತ್ತರವಾದ ಒಂದು ಕಾರ್ಯಕ್ಕೆ ಇರಲಿ.'ಸ್ವಚ್ಛ

ಭಾರತ ಬುನಾದಿಗೆ ನಾವು ಸಹ ಕೈ ಜೋಡಿಸೋಣ.ಪ್ಲಾಸ್ಟಿಕನ್ನು ತ್ಯಜಿಸೋಣ

'ಸ್ವಚ್ಛ ಭಾರತ್,ವಿಶ್ವ ಭಾರತ್'

*Essay written By : HEMANTH KRISHNA .S*

*Coaperation : SACHIN,AJMAL KHAN*



# *THE VALUE OF FRIEDSHIP*

*A friend is a blessing from God. We all need good friends. We cannot lead happy life without good friends.*







*Now the question is about the qualities of a good friend. A friend supports us when we are in trouble .He gives us encouragement. He will be happy when we are happy. He will do everything to make us happy.*







*We should be very careful in selecting friends .*
*If you fail in selecting good once, you will be in trouble.*

*Let us consider  a story hear. Once  two friends set out on a long journey . On their journey the had to pass through a forest. One said My dear   do not be afraid of animals. I am  with you . No animal with harm you.*

# ಜೀವನ ಚರಿತ್ರೆ




ವ್ಯಕ್ತಿ: **ರಾಘವಾಂಕ**

ಚರಿತ್ರೆ: ಇವರು ನಡುಗನ್ನಡ ಕಾಲದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬ. ಈತನ ಕಾಲ ೧೩ ನೇ ಶತಮಾನವಾಗಿದ್ದು ಕ್ರಿ.ಶ.೧೩೦೦ರ ವರೆಗೆಬದುಕ್ಕಿದ್ದನೆಂದು ಹೇಳಲಾಗಿದೆ.ಊರು ಹಂಪೆ.ತಂದೆ ಮಹದೇವ , ತಾಯಿ ರುದ್ರಾಣಿ.ಕನ್ನಡದ ಪ್ರಸಿದ್ಧ ಕವಿ ಹರಿಹರ ಈತನ ಸೋದರ ಮಾವ ಮತ್ತು ಗುರು. ಇವನು ಹಂಪೆಯ ವಿರೂಪಾಕ್ಷ ದೇವರ ಪರಮಭಕ್ತನಾಗಿದ್ದ.ಷಟ್ಪದಿ ಛಂದಸ್ಸಿನಲ್ಲಿ ಮೊದಲಿಗೆ ಸಮಗ್ರ ಕಾವ್ಯ ರಚಿಸಿದ ರಾಘವಾಂಕನಿಗೆ **ಉಭಯಕವಿಕಮಲರವಿ,ಕವಿಶರಭ ಭೇರುಂಡ** ಮುಂತಾದ ಬಿರುದುಗಳಿದ್ದವು.*ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚರಿತ, ಶರಭ ಚರಿತ, ಸೋಮನಾಥ ಚರಿತ್ರೆ, ಹರಿಹರ ಮಹತ್ವ* ರಾಘವಾಂಕರಚಿಸಿದ ಕಾವ್ಯಗಳಾಗಿವೆ.

ಸಂಗ್ರಹ: **ಹೇಮಂತ್ ಕೃಷ್ಣ.ಯಸ್**

# ಮುಂಜಾನೆಯ ಸೊಬಗು

*ಮಂಜು ಕವಿದ ಬಾನಿನಲ್ಲಿ*
*ರವಿಯು ಇಣುಕಿ ನಿಂದ*
*ಪೂರ್ವದಲ್ಲಿ ಕದವ ತೆರೆದು*
*ಸೂರ್ಯ ಮೇಲೆ ಬಂದ*

*ಮಂಜಿನ ನಸು ಹನಿಯಿಂದ*
*ಸೂರ್ಯ ನಗುತಾ ನಿಂದ*
*ವಿಶಾಲನಾದ ವಿಶ್ವಕ್ಕೆಲ್ಲ*
*ನವಜೀವನವಾದ*

*ಇವನ ಕಿರಣ ಸ್ಪರ್ಶದಿಂದ*
*ಹೂವೆಲ್ಲಾ ಅರಳಿತು*
*ಇಳೆಗೆ ಕಳೆಯ ತಂದಿತು*
*ಸಿಖದ ನೋಟ ನೀಡಿತು*

*ತಂಪು ಕವಿದ ದೇಹಕೆ*
*ಬಿಸಿ ಬೇಗೆಯ ತಂದಾ*
*ಮುದುಡಿ ಹೋದ ಮನಸಿಗೆ*
*ಉತ್ಸಾಹವ ತಂದಾ*

**Lavanya.s 9th STANDARD**

# ನವವರ್ಷಧಾರೆ

*ಅದೋ ನೋಡದೋ ವರಣರಾಜನ ಆಗಮನ*
*ಬೆಂಗಾವಲಿಗಾಗಮನಿಸಿದೆ ರಣವೀರ ಪವನ*
*ಮದಗಜನ ತೆರದಲ್ಲಿ ನುಗ್ಗಿ ಧೂಳ್ ಕೆರೆದು*
*ರಭಸದಿ ಆರ್ಭಟಿಸಿದೆ ವೃಕ್ಷಗಳ ಜಡಿದು*

*ಉಷ್ಣದಿಂ ಸೊರಗಿದ್ದ ಗಿಡಕೆ ನವಚಿಗುರು*
*ಫಲವಾಗಿ ಕಾಣುತಿಹದೆಲ್ಲೆಲ್ಲೋ ಹಸಿರು*
*ಈಳವರ ಉನ್ಮದವು ಆ ದಿನ ಅನಂತ*
*ಆಗಮಿಸಿದೆ ಜೀವನದಿ ನವಯುಗ ವಸಂತ*

*ಘರ್ಷಿಸಿದವು ಮೇಘಗಳು  ಘರ್ಜಿಸಿತು ಗುಡುಗು*
*ವಿಕ್ಷಸಿದೆವಲ್ಲಿ  ನಾವ್ ಪ್ರಕೃತಿಯ ಸೊಬಗು*
*ಉದುರಿದವು  ಉಲ್ಕೆಗಳು ಬೆಳಗಿಗವು ಮಿಂಚು*
*ಸುಳಿಗಾಳಿಗಳು ಸುಳಿಸುಳಿದು ಹಾರಿಸಿತು ಹಂಚು*
*ರೋದಿಸಿದವು ಖಗಮಿಗಗಳು ಹೆದರಿ ಮುದುರಿದವು*
*ಗುಡುಗಿದ ಆರವಕಂಜಿ ಹಸುಳೆಗಳರಚಿದವು*
*ನದಿಯೇ ಮುನ್ನುಗ್ಗಿ ಹರಿಯಿತು ಮನೆಮುಂದೆ*
*ನವಜೀವ, ನವಭಾವ, ನವ ವೇಗದಿಂದೆ*

*ಮಾನವನು ಕಾಲ್ನಡುಗಿ ತಲೆಗೆ ಕೈ ಹೊತ್ತ*
*ದೇವರ ಗುಡಿಯುತ್ತ ಬರಿಯಿತವನ ಚಿತ್ತ*

*Lavanya.s*
*9th Standard*

- ➢
- ➢

- 
- # ವಚನ ಸಿರಿ

*ಇವನಾರವ ಇವನಾರವ ಇವನಾರವ ಎಂದೆನಿಸಹದಿರಯ್ಯಾ*
*ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ*
*ಕೂಡಲಸಂಗಮದೇವ ನಿಮ್ಮ ಮನೆಯ*
*ಮಗನೆಂದೆನಿಸಯ್ಯಾಸ್ವಚ್ಛವಾರಿಗಿದ್ದಲ್ಲಿ*

_ಬಸವಣ್ಣ

*ವಿದ್ಯೆ ಕಲಿತವರೆಲ್ಲ ಕೇಳಿಲ್ಲಿ*
*ಗದ್ದೆ ಕೆಲಲವು ಕೀಳಲ್ಲ ಮೇಲು*
*ಮುದ್ದೆಯಿಲ್ಲದೆ ಬದುಕಲುಂಟೆ*
*ಅಯ್ಯ ಮನುಜ*
*ಬದ್ದ ಮಂಕಾಗದಿರಲಿ ದಿವ್ಯಶಕ್ತಿ*

__ದಿವ ಕೊಕ್ಕಡ

*ಕನ್ನಡಿ ಸ್ವಚ್ಛವಾಗಿದ್ದಲ್ಲಿ ಪ್ರತಿಬಿಂಬ ಸುಂದರವಾಗಿ ಪ್ರತಿಫಲಿಸುವಂತೆ*
*ಮನಸ್ಸು ಸ್ವಚ್ಛವಾಗಿದ್ದಲ್ಲಿ ಜಗತ್ತು ಸುಂದರವಾಗಿ ಕಾಣುತ್ತದೆ.*
*ಮೊದಲು ನಮ್ಮ ಅಂತರಂಗವನ್ನು ಸ್ವಚ್ಛವಾಗಿರಿಸಲು ಕಲಿಯೋಣ.*

__ಡಾ. ಡಿ.ವಿರೇಂದ್ರ ಹೆಗ್ಗಡೆ

*ಅಡಗಡಿಗಿಳಿಯುಕತಿದೆ ಅಂತರ್ಜಲ*
*ಬಡಿದಾಡಿಕೊಳುತಿವೆ ಜೀವಕುಲ*
*ಬಿಡುಬಿಡೆಲೋ ದೌರ್ಜನ್ಯ*
*ಅಯ್ಯ ಮನುಜ*
*ಸುಡುಗಾಡಾಗದಿರಲು ಧರೆ ದಿವ್ಯಶಕ್ತಿ*

__ದಿವ ಕೊಕ್ಕಡ

*Lavanya.s 9th Standard*

# ವನಸಿರಿ

ಎತ್ತ ನೋಡಿದರತ್ತ ಹಸಿರ ವರ್ಣದಿ
ಕಂಗೊಳಿಸುತ್ತಿತ್ತು ಪ್ರಕೃತಿಯು ಅಂದು
ಮಾಸಿ ಹೋಗಿಹುದು ಬಣ್ಣ
ಎಲ್ಲೆಲ್ಲೂ ಬರಡು ಭೂಮಿ ಇಂದು

ಎಳೆ ಬಿಸಿಲಿಗೆ ನಗು ಚೆಲ್ಲುತ
ತಲೆದೂಗಿದ ಸುಮಗಳ
ವಿಷಗಾಳಿಗೆ ನಶೆಯೇರಿತು
ಬಾಡಿದೆ ಎಲ್ಲಾ ಎಲೆಗಳು



ಚಿಗುರಬೇಕಿದ್ದ ಮರಗಳು
ಬಲಿಯಾಗುತ್ತಿವೆ ಮಾನವನ ದುಷ್ಕೃತ್ಯಕೆ
ದಿನ ದಿನವೂ ಹಿಂಸೆ ಅವಕೆ
ಕೊನೆಯೆಂದು ಈತನ ಕೃತ್ಯಕೆ

ದೈತ್ಯ ದೇಹದ ವೃಕ್ಷವೂ
ಸೋತಿದೆ ಚಿಕ್ಕ ಯಂತ್ರಕೆ
ಏನು ಮಾಡಲು ಅಸಾಧ್ಯ ಅವು
ಸೋಲಲೇ ಬೇಕು ಕುತಂತ್ರಕೆ

ಗಿಡ ಮರ ಸುಮ ಬಳ್ಳಿ
ತೊಟ್ಟಿದೆ ಬಣ್ಣ ಬಣ್ಣದ ಉಡುಗೆ
ಸ್ವಾರ್ಥಕೆ ಬಳಸುವ ಹಕ್ಕಿಲ್ಲ ನಮಗೆ
ಅದು ಪ್ರಕೃತಿ ಮಾತೆಯ ಕೊಡುಗೆ

ತಂಪಾದ ಗಾಳಿ , ಇಂಪಾದ ನೆರಳು
ನೀಡಿಹುದು ನಮಗೆ ಕಾನನ ಗಿರಿ
ಅದನು ಉಳಿಸಿ ಬೆಳೆಸೋಣ
ಕಂಗೊಳಿಸಲಿ ಎಲ್ಲೆಡೆ ವನಸಿರಿ

ಇತೀ ಸುಚಿತ

# ಪ್ಲಾಸ್ಟಿಕಾಸುರ ಸಂಹಾರ.



ಪ್ಲಾಸ್ಟಿಕ್ ಎಂಬ ಜಗದೊಳಗೆ ಒಂದು ಮಗು

ಯಾರಿಗೂ ಕೇಳಿಸುತ್ತಿಲ್ಲ ಕಂದಮ್ಮನ ಕೂಗು

। ೧ ।

ಕಾರು-ಬೈಕು-ರೈಲುಗಳ ಕಿರಿಕಿರಿ ಸದ್ದು

ವಾತಾವರಣಕೆ ಇದು ದೊಡ್ಡ ಗುದ್ದು ।

ಪ್ಲಾಸ್ಟಿಕ್ ಗೆ ಜನರೆಲ್ಲರೂ ಮಾಡುವರು ಮುದ್ದು

ಇದಕ್ಕಿಲ್ಲವೇ ಚತುರರ ಮದ್ದು ? । ೨ ।



ಬಾಲ – ಭಾರತೀಯರೆಲ್ಲರೂ ನೋಡಿ

ಪ್ಲಾಸ್ಟಿಕ್ ಮಾಡಿದ ಜಾಲದ ಮೋಡಿ ।

ಇದರಿಂದ ಎಲ್ಲರ ಮುಖಗಳು ಬಾಡಿ

ಈಗ ಅದು ಬಿಡುವುದು ಭಾರತದ ಗಡಿ । ೩ ।



**ರಚನೆ: ಹೇಮಂತ್ ಕೃಷ್ಣ. ಯಸ್**

# ಅಹಿಂಸೆ

ಒಬ್ಬ ರಾಜನಿಗೆ ತುಂಬ ಬೇಟೆಯ ಹುಚ್ಚು. ಪ್ರತಿದಿನ ಬೇಟೆಗೆ
ಹೋಗಿ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿದ್ದ. ಅದೇ ಅವನಿಗೆ
ಮಹದಾನಂದ. ಅವನ ಮಂತ್ರಿ ತುಂಬ ಧಾರ್ಮಿಕ ಸ್ವಭಾವದವನು.ಪ್ರಾಣಿ ಹಿಂಸೆಯನ್ನು
ಸಹಿಸುತ್ತಿರಲಿಲ್ಲಿ. ರಾಜ ಬೇಟೆಯಾಡುವುದನ್ನು ತಪ್ಪಿಸುವುದಕ್ಕೆ ಮಂತ್ರಿ ಹಲವು ರೀತಿಯಲ್ಲಿ
ಪ್ರಯತ್ನಿಸಿದ. ರಾಜನಿಗೆ ಮಂತ್ರಿಯ ಮೇಲೆ ತುಂಬ ಗೌರವ. ಆದರೂ ಬೇಟೆಯ ವಿಷಯದಲ್ಲಿ
ಮಂತ್ರಿಯ ಮಾತನ್ನು ಕೇಳಲೇ ಇಲ್ಲಿ

ಒಂದು ದಿನ ರಾಜ ಕಾಡಿಗೆ ಬೇಟೆಗೆ ಹೋಗಿದ್ದ. ಅವನಿಗೆ
ಹುಲಿಯ ಧ್ವನಿ ಕೇಳಿಸಿತು. ಇಂದು ತನ್ನ ಬಾಣಕ್ಕೆ ಹುಲಿಯೇ ಬಲಿಯಾಗುತ್ತಿದೆ ಎಂದು
ರಾಜನಿಗೆ ಪರಮಾನಂದವಾಯಿತು. ಅವನು ಧ್ವನಿ ಬಂದ ಕಡೆ ಸದ್ದಿಲ್ಲದೆ ಮುಂದುವರಿದ.
ದೂರದಲ್ಲಿ ಒಂದು ಹುಲಿ ಕಾಣಿಸಿತು. ಅದು ತನ್ನ ಮುಖವನ್ನು ಬೇರೆ ದಿಕ್ಕಿಗೆ ತಿರುಗಿಸಿಕೊಂಡಿತ್ತು.
ಅದರ ಬೆನ್ನಿನ ಭಾಗ ಮಾತ್ರ ಅವನಿಗೆ ಕಾಣಿಸುತ್ತಿತ್ತು . ಅವನು ಸ್ವಲ್ಪವೂ ಸದ್ದು ಮಾಡದೆ ಹುಲಿಗೆ
ಸರಿಯಾಗಿ ಗುರಿಯಿಟ್ಟು ಬಾಣವನ್ನು ಬಿಟ್ಟ.

ಬಾಣ ತನ್ನ ಕೆಲಸವನ್ನು ಮಾಡಿತು. 'ಹಾ' ಎಂಬ ಮನುಷ್ಯನ ಆರ್ತನಾದ ಅವನಿಗೆ ಕೇಳಿಸಿತು.
ರಾಜ ದಿಗ್ಭ್ರಾಂತನಾದ. ಹುಲಯ ಕಡೆ ಧಾವಿಸಿದ. ಹತ್ತಿರ ಹೋಗಿ ನೋಡುತ್ತಾನೆ. ಅಲ್ಲಿ
ಹುಲಿಯೇ ಇರಲಿಲ್ಲ. ಅವನಿಗೆ ಪರಮಾಶ್ಚರ್ಯ! ಹುಲಿಯ ಚರ್ಮವನ್ನು ಹೊಂದಿದ್ದ
ಮನುಷ್ಯ ಕಾಣಸಿದ. ಅವನು ನೆಲದ ಕಡೆ ಮುಖ ಮಾಡಿಕೊಂಡು ಮಲಗಿದ್ದ. ಬಾಣದ
ಇರಿತದಿಂದ ತೀವ್ರವಾಗಿ ಸಂಕಟಪಡುತ್ತಿದ್ದ.

ರಾಜನು ಅವನ ಶರೀರದಿಂದ ಬಾಣವನ್ನು ತೆಗೆದ. ಶರೀರವನ್ನು ತಿರುಗಿಸಿದನು. ಆಶ್ಚರ್ಯ!
ಅದು ತನ್ನ ಅಪ್ತ ಮಂತ್ರಿ! ರಾಜನು ತುಂಬ ಪರಿತಪಿಸುತ್ತ 'ಹೀಗೇಕೆ ಮಾಡಿದೆ?',ಎಂದು
ಕೇಳಿದನು.

'ನೀನು ಯಾವುದೇ ರೀತಿಯಲ್ಲಿಯೂ ಪ್ರಾಣಿ ಬೇಟೆಯನ್ನು ನಿಲ್ಲಸಲೇ ಇಲ್ಲ. ನನ್ನನ್ನೇ
ಬಲಿ ಕೊಟ್ಟಾದರೂ ಪ್ರಾಣಿಹತ್ಯೆಯನ್ನು ನಿಲ್ಲಿಸೋಣ ಎಂದು ಹೀಗೆ ಮಾಡದೆ. ಇನ್ನಾದರೂ
ನೀನು ಈ ಪ್ರಾಣಿ ಹಿಂಸೆಯನ್ನು ನಿಲ್ಲಿಸು' ಎನ್ನುತ್ತ ಪ್ರಾಣ ಬಿಟ್ಟ.

ರಾಜನ ಮೇಲೆ ಇದು ಎಂತಹ ಅಘಾತ ಉಂಟುಮಾಡಿತೆಂದರೆ ಅಂದೇ ಅಲ್ಲಿಯೇ ಇನ್ನು ಬೇಟೆಯಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ.

ನೀತಿ:

ಪರಹಿಂಸೆಯಲ್ಲಿ ಆನಂದ ಪಡಬಾರದು. ಹಿಂಸೆಯಿಂದ ಇತರರಿಗೆ ಹೇಗೆ ದು:ಖವಾಗುತ್ತದೆ ಎಂಬುದನ್ನು ಚಿಂತಿಸಿದಾಗ ಚಿಂತಿಸಿದಾಗ ಹಿಂಸಾಪ್ರವೃತ್ತಿ ಕಡಿಮೆಯಾಗುತ್ತದ

**By:9B Girl**

**Poojashree.K**

Anujna.N

# ಸ್ಟೀಫನ್ ಹಾಕಿಂಗ್



*ಸ್ಟೀಫನ್ ಹಾಕಿಂಗ್ ಇವರ ಹೆಸರನ್ನು ಯಾರು ತಾನೇ ಕೇಳಿಲ್ಲ..?*

*ಭೌತ ಶಾಸ್ತ್ರದಲ್ಲಿ ಐಸಾಕ್ ನ್ಯೂಟನ್ ನಂತರ ಅತಿ ದೊಡ್ಡ ಹೆಸರು ಸ್ಟೀಫನ್ ಹಾಕಿಂಗ್*

*ಈ ಖಗೋಳ ವಿಜ್ಞಾನ ಖಗೋಳ ಭೌತಶಾಸ್ತ್ರ ದಲ್ಲಿ ಅಪಾರ ಕೀರ್ತಿಯನ್ನುಗಳಿಸಿದ್ದಾರೆ.ಇವರು ಬರೆದ ಎ ಬ್ರೀಫ್ ಹಿಸ್ಟರಿ ಆಫ್ ಟೈಮ್ ಎಂಬ ಪುಸ್ತಕವು ಜಗದ್ವಿಖ್ಯಾತವಾಗಿದೆ.*

*ಆದರೆ ಅಚ್ಚರಿ ಏನೆಂದರೆ ಇಂಥ ಶ್ರೇಷ್ಠ ವಿಜ್ಞಾನಿಯು ಕಳೆದ ಐವತ್ತು ವರ್ಷಗಳಿಂದ ಮೋಟಾರ್ ನ್ಯೂರನ್ ಡಿಸೀಸ್ - ಈ ರೋಗದ ಲಕ್ಷಣಗಳೆಂದರೆನ ಈ ಕಾಯಿಲೆಯುಂಟಾದ ರೋಗಿಯ ಅಂಗಾಂಶಗಳು ಕೊಂಚಕೊಂಚವಾಗೇ ತಮ್ಮ ಕಾರ್ಯವನ್ನು ಸ್ಥಗಿತಗೊಳಿಸುತ್ತಾ ಬರುತ್ತದೆ.*

*ದಿನಕಳೆದಂತೆ ದೇಹದ ಭಾಗಗಳು ಚಲನೆಯನ್ನು ಕಳೆದುಕೊಳ್ಳುತ್ತದೆ ಈ ಕಾಯಿಲೆ ತುತ್ತಾದ ವ್ಯಕ್ತಿಯು ಪಾರ್ಶ್ವವಾಯುಗೆ ತುತ್ತಾಗುತ್ತಾನೆ*

ಸಂಗ್ರಹ

1. ಮಹಾತ್ಮ ಗಾಂಧಿಯವರು ಎಂದು ಹಾಗೂ ಎಲ್ಲಿ ಜನಿಸಿದರು?
ಉತ್ತರ: ಅಕ್ಟೋಬರ್ 02, 1869 ರಂದು ಗುಜರಾತಿ ಪೋರಬಂದರಿನಲ್ಲಿ ಜನಿಸಿದರು

2. ಮಹಾತ್ಮ ಗಾಂಧಿಯವರ ತಂದೆ-ತಾಯಿ ಹಾಗೂ ಪತ್ನಿ ಮತ್ತು ಮಕ್ಕಳ ಹೆಸರೇನು?
ಉತ್ತರ: ತಂದೆ ಕರಮಚಂದ್ರ ಗಾಂಧಿ ಹಾಗೂ ತಾಯಿ ಪುತಲೀಬಾಯಿ ಮತ್ತು ಪತ್ನಿ ಕಸ್ತೂರ ಬಾ. ಇನ್ನು ಗಾಂಧಿಯವರಿಗೆ ೪ ಜನ ಮಕ್ಕಳಿದ್ದು, ಅವರ ಹೆಸರುಗಳು ಹೀಗಿವೆ ಹರಿಲಾಲ್ ಗಾಂಧಿ, ಮಣಿಲಾಲ್ ಗಾಂಧಿ, ರಾಮದಾಸ್ ಗಾಂದಿ ಮತ್ತು ದೇವದಾಸ್ ಗಾಂಧಿ.

3. ಮಹಾತ್ಮ ಗಾಂಧಿಯವರಿಗೆ ಎಷ್ಟನೇ ವಯಸ್ಸಿಗೆ ವಿವಾಹವಾಯಿತು?
ಉತ್ತರ:13 ವರ್ಷ

4.ಮಹಾತ್ಮ ಗಾಂಧಿ ಅವರ ಹತ್ಯೆ ಯಾವಾಗಾ ಆಯಿತು ಹಾಗೂ ಹತ್ಯೆಗೈದವರಾರು?
ಉತ್ತರ :30-01-1948 , ನಾಥೂರಾಮ್ ವಿನಾಯಕ್ ಗೋಡ್ಸೆ

5. ಮಹಾತ್ಮ ಗಾಂಧಿ ಅವರು ಯಾವ ಸುದ್ದಿ ಪತ್ರಿಕೆ ಸಂಪಾದಕರಾಗಿದ್ದರು?

ಉತ್ತರ: ದಕ್ಷಿಣ ಆಫ್ರಿಕಾದಲ್ಲಿನ ಇಂಡಿಯನ್ ಒಪಿನಿಯನ್ ಪತ್ರಿಕೆ, ಭಾರತದ ಗುಜರಾತಿ, ಹಿಂದಿ ಮತ್ತು ಆಂಗ್ಲಬಾಷೆಯ ಹರಿಜನ್ ಪತ್ರಿಕೆ, ಆಂಗ್ಲ ಭಾಷೆಯ ಯಂಗ್ ಇಂಡಿಯಾ ಪತ್ರಿಕೆ ಹಾಗೂ ಗುಜರಾತಿನ ನವಜೀವನ್ ಎಂಬ ಮಾಸ ಪತ್ರಿಕೆ

6. ಯಾವಾಗ ಗಾಂಧೀಜಿಯರು ಉಪ್ಪಿನ ಸತ್ಯಾಗ್ರಹ ಮಾಡಿದರು?

ಉತ್ತರ: ಮಾರ್ಚ್ 12, 1930 ರಂದು

7.ಗಾಂಧೀಜಿಯವರು ತಂಗಿದ್ದ ಕರ್ನಾಟಕದ ಗಿರಿಧಾಮ ಯಾವುದು?

ಉತ್ತರ: ನಂದಿ ದುರ್ಗಾ

8. ಗಾಂಧೀಜಿಯವರ ರಾಜಕೀಯ ಗುರು ಯಾರು? \

ಉತ್ತರ: ಗೋಪಾಲ್ ಕೃಷ್ಣ ಗೋಖಲೆ

9. ಯಾವ ವರ್ಷದಲ್ಲಿ ಗಾಂಧೀಜಿವರು ವಕೀಲರಾಗಿದ್ದರು?

ಉತ್ತರ: 1891

10. ಗಾಂಧೀಜಿಯನ್ನ ಯಾವ ರೈಲ್ವೇ ನಿಲ್ದಾಣದಲ್ಲಿ ಅವಮಾನಿಸಿ ಬಲವಂತವಾಗಿ ಇಳಿಸಲಾಗಿತ್ತು?

ಉತ್ತರ: ದಕ್ಷಿಣ ಆಫ್ರೀಕಾದ ಪೀಟರ್ ಮಾರಿಟ್ಸ್ ಬರ್ಗ್ ನಿಲ್ದಾಣದಲ್ಲಿ

11. ಗಾಂಧೀಜಿಯವರ ಮೂರನೇ ಸತ್ಯಾಗ್ರಹ ಯಾವುದು?

ಉತ್ತರ: ಖೇಡಾ ಸತ್ಯಾಗ್ರಹ

12. ಯಾವ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದರು?

ಉತ್ತರ: 1924 ರಲ್ಲಿ ಬೆಳಗಾವಿ

13. ದಕ್ಷಿಣ ಆಫ್ರೀಕಾದಲ್ಲಿ ಗಾಂಧೀಜಿಯವರನ್ನ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸಲು ಬಯಸಿದವರು ಯಾರು?

ಉತ್ತರ: ಎ ಡಬ್ಲ್ಯೂ ಬೇಕರ್


14. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂಧಿಸಲ್ಪಟ್ಟಾಗ ಗಾಂಧೀಜಿಯವರನ್ನ ಎಲ್ಲಿ ಬಂಧನದಲ್ಲಿಡಲಾಯಿತು?

ಉತ್ತರ: ಅಹಮದಾಬಾದ್


15.ಗಾಂಧೀಜಿಗೆ ಮಹಾತ್ಮ ಎಂದು ಟೈಟಲ್ ನೀಡಿದವರು ಯಾರು?

ಉತ್ತರ: ರವೀಂದ್ರನಾಥ ಟಾಗೋರ್


Written By: ***Hemanth Krishna.S***








# ಬ್ರಹ್ಮ ಗುಪ್ತ




ಬ್ರಹ್ಮಗುಪ್ತ  ಮಹಾನ್ ಗಣಿತಜ್ಞ . ಇವರು ಭಾರತೀಯ
ಗಣಿತ  ಲೋಕವನ್ನು
ಉನ್ನತ ಸ್ಥಾನಕ್ಕೆ ಏರಿಸಿದರು.  ಆದ್ದರಿಂದಲೇ ಹನ್ನೆರಡನೆಯ ಶತಮಾನದ
ಮಹಾನ್  ಗಣಿತಜ್ಞ ಭಾಸ್ಕರಾಚಾರ್ಯ "ಗಣಿತ ಚಕ್ರ ಚೂಡಾಮಣಿ"
ಎಂದು
ಕರೆದರು.  ಬ್ರಹ್ಮಗುಪ್ತ ಉಚ್ಚ  ಗಣಿತ ಸಂಖ್ಯಾತ್ಮಕ  ವಿಶ್ಲೇಷಣೆ ಶಾಖೆಯ
ಸ್ಥಾಪಕರು. ಬ್ರಹ್ಮಗುಪ್ತ ರು ಭಿನ್ನಾಲಿ ಎಂಬ ಸ್ಥಳದಲ್ಲಿ ಜನಿಸಿದರು
ಅವರು ಚಾಪವಂಶದ ರಾಜ ವ್ಯಾಘ್ರಮುಖನ ದರ್ಬಾರಿನಲ್ಲಿ ರಾಜ
ಜ್ಯೋತಿಷಿಗಳಿದ್ದರು .  ಬ್ರಹ್ಮಗುಪ್ತರು ಬರೆದ ಸಂಹಿತೆಯಲ್ಲಿ
“ಬ್ರಹ್ಮ ಸ್ಪುಟ ಸಿದ್ಧಾಂತ"  ಮತ್ತು "ಕರುಣ ಖಂಡ"ವು ಅತಿ ಪ್ರಸಿದ್ಧವಾಯಿತು.

ಬ್ರಹ್ಮಗುಪ್ತರ ಮಹತ್ವದ ಕೊಡುಗೆಯೆಂದರೆ ಶೂನ್ಯ ಬಳಕೆಯ
ನಿಯಮ. ಬ್ರಹ್ಮಗುಪ್ತರ ಪ್ರಕಾರ ಶೂನ್ಯದಲ್ಲಿ ಯಾವುದೇ ಸಂಖ್ಯೆಯನ್ನು
ಕೂಡಿಸಿದರೆ ಅಥವಾ ಕಳೆದರೆ ಆ ಸಂಖ್ಯೆಯಲ್ಲಿ ಯಾವ ಅಂತರವೂ
ಆಗಲಾರದು. ಅವರ ಪ್ರಕಾರ ಶೂನ್ಯವನ್ನು ಯಾವುದೇ
ಸಂಖ್ಯೆಯಿಂದ ಗುಣಿಸಿದರೂ ಶೂನ್ಯವೇ ಆಗುತ್ತದೆ.
“ಬ್ರಹ್ಮಸ್ಪುಟ ಸಿದ್ಧಾಂತ" ಬ್ರಹ್ಮಗುಪ್ತರ ಒಂದು ಮಹತ್ವದ
ಗ್ರಂಥ. ಅದರಲ್ಲಿ ಆರಂಭದಲ್ಲಿ ಜ್ಯೋತಿಷ್ಯ ಮತ್ತು ಗಣಿತ
ವಿಷಯ ಬರೆದಿದ್ದಾರೆ. ನಂತರ ಕೆಲವು ಅಧ್ಯಾಯಗಳು
ಅಂಕಗಣಿತ ವಿಷಯ ಬರೆಯಲಾಗಿದೆ. ಮತ್ತೆ  ಕೆಲವು
ಅಧ್ಯಾಯಗಳು  ಬೀಜಗಣಿತ ಕುರಿತು ಬರೆದಿದ್ದಾರೆ.
ಬ್ರಹ್ಮಗುಪ್ತರ ಗ್ರಂಥಗಳಲ್ಲಿ  ಭೀಜಗಣಿತವೇ
ಮುಖ್ಯವಾದದ್ದು. ಅದರಲ್ಲಿ ಬರೆದ ಕರುಣ ಖಂಡವು



ಒಂದು ಖಗೋಳ ಶಾಸ್ತ್ರದ ಪುಸ್ತಕ ವಾಗಿದೆ. ಅದರಲ್ಲಿ ಬ್ರಹ್ಮ ಗುಪ್ತರವರು ಜ್ಯೋತಿಷ್ಯದ ಪ್ರಶ್ನೆಗೆ ಪರಿಹಾರ ಹೇಳಲು ಬೀಜಗಣಿತ ಬಳಸಿದ್ದಾರೆ. ವರ್ಗೀಕರಣ ವರ್ಣನೆಯನ್ನು ಪ್ರಥಮವಾಗಿ ಮಾಡಿದ ಕೀರ್ತಿಯು ಅವರಿಗೆ ಸಲ್ಲುತ್ತದೆ.



ತ್ರಿಕೋನ ಮಿತಿಯಲ್ಲಿ ಬ್ರಹ್ಮಗುಪ್ತನು 'ಜ್ಯಾ'ಪ್ರಯೋಗ ಮಾಡಿದನು. ಅವನು ಒಂದು ಸರಳ ಸಮೀಕರಣವನ್ನು $B+X+B=0$ ಅಲ್ಲದೆ $AX2+X+C=0$ ಮೊದಲಾದವನ್ನು ಬಿಡಿಸುವ ರೀತಿ ಬರೆದಿದ್ದಾರೆ. ಅನಿವಾರ್ಯ ಸಮೀಕರಣವನ್ನು ಬಿಡಿಸುವ ಭಾಷೆಯಲ್ಲಿ ವರ್ಗ ಪ್ರಕೃತಿ ಎಂದು ಕರೆಯಲಾಗುತ್ತದೆ. ಪಾಶ್ಚಾತ್ಯ ಗಣಿತಶಾಸ್ತ್ರದಲ್ಲಿ ಇದನ್ನು ಪೆಲ ಸಮೀಕರಣ

ಎಂಬ ಹೆಸರಿನಿಂದ ಕರೆಯಲಾಗುತ್ತದೆ.
ಅಂಗ್ಲ ವಿದಾಾಂಸ ಕೋಲಬುಕನು ಬ್ರಹ್ಮಗುಪ್ತನ ಬೀಜಗಣಿತ ಗ್ರಂಥವನ್ನು ಅಂಗ್ಲ ಭಾಷೆಗೆ ಅನುವಾದಿಸಿದರು. ಆಧುನಿಕ ಭೀಜಗಣಿತಕ್ಕೆ ಬ್ರಹ್ಮಗುಪ್ತನ ಗ್ರಂಥ ತಳಹದಿಯಾಗಿದೆ

COLLECTION: **Shreekanth.S ,Karthik.A**

# ಮಾಲು ಕಾಗೆ ಮತ್ತು ನೀಲು ಕೊಕ್ಕರೆ




ಒಂದಾನೊಂದು ಕಾಡಿನಲ್ಲಿ ಮಾಲು ಕಾಗೆ ಮತ್ತು ನೀಲು ಕೊಕ್ಕರೆ ವಾಸವಾಗಿದ್ದವು.ಒಂದು ದಿನ ಅವುಗಳೆರಡು "ನಾನು ಹೆಚ್ಚು ದೂರ ಹಾರುವುದು, ನಾನು ಹೆಚ್ಚು ದೂರ ಹಾರುವುದು" ಎಂದು ಜಗಳವಾಡ ತೊಡಗಿದವು.ಇದನ್ನು ಕಂಡ ಚಿನ್ನು ಪಾರಿವಾಳ ಹೇಳಿತು" ನಾನು ಒಂದು ಚೀಲದಲ್ಲಿ ಉಪ್ಪು ಮತ್ತು ಇನ್ನೊಂದು ಚೀಲದಲ್ಲಿ ಹತ್ತಿಯನ್ನು ಇಡುತ್ತೇನೆ ,ನಿಮಗೆ ಇಷ್ಟವಾದ ಚೀಲವನ್ನು ಹಿಡಿದು ಹಾರಿ "ಎಂದು ಹೇಳಿತು.ನೀಲು ಕೊಕ್ಕರೆ ಮೊದಲು ಹೋಗಿ ಹತ್ತಿಯನ್ನು ಹಿಡಿದು ಕೊಂಡಿತು.ಆದರೆ ಮಾಲು ಕಾಗೆ ಆಕಾಶವನ್ನು ನೋಡಿದಾಗ ಕಪ್ಪುಮೋಡಗಳು ಆಕಾಶದಲ್ಲಿ ತೇಲಾಡಿಕೊಂಡಿದ್ದವು ಆದ್ದರಿಂದ ಮಾಲು ಕಾಗೆ ಉಪ್ಪಿನ ಚೀಲವನ್ನು ಹಿಡಿದು ಕೊಂಡಿತು.ಸ್ಪರ್ಧೆ ಆರಂಭವಾಯಿತು.ನೀಲು ಕೊಕ್ಕರೆ ಮಾಲು ಕಾಗೆಯನ್ನು ಸೋಲಿಸಿತು.ಆದರೆ ಮಳೆಯು ಜೋರಾಗಿ ಬರಲು ಆರಂಭವಾಯಿತು.ಮಾಲು ಕಾಗೆ ಹಿಡಿದ ಚೀಲದ ಉಪ್ಪು ಕರಗಿತು.ನೀಲು ಕೊಕ್ಕರೆ ಹಿಡಿದ ಚೀಲದ ಹತ್ತಿಯ ಭಾರ ಹೆಚ್ಚಿತು.ಆದ್ದರಿಂದ ಮಾಲು ಕಾಗೆ ಸ್ಪರ್ಧೆಯಲ್ಲಿ ಗೆದ್ದಿತು.

ಇತೀ

ಶ್ರಾವಣ್ಯ

# ಮಾನವೀಯತೆಯ ಮಹತ್ವ

ಪ್ರಪಂಚದಲ್ಲಿ ವಾಸಿಸುವ ಜೀವಿಗಳಲ್ಲೆ ಅತ್ಯಂತ ಬುದ್ದಿವಂತ ಜೀವಿ ಎಂದರೆ ಮನುಷ್ಯನಾಗಿದ್ದಾನೆ. ತನ್ನ ಬುದ್ದಿವಂತಿಕೆಯಿಂದ ಇಡೀ ಪ್ರಪಂಚವೇ ತನ್ನ ಅಂಗೈಯಲ್ಲಿ ಇರಿಸಿಕೊಂಡಿದ್ದಾನೆ. ಆದರೆ ಮನುಷ್ಯ ಬೆಳೆದಂತೆ ಆತನ ಹೃದಯ ಬೆಳೆಯಲಿಲ್ಲ. ದಯೆ, ಕರುಣೆ ,ಪರೋಪಕಾರ, ಮಾನವೀಯತೆ, ಸಹಾಯ, ಸಹಕಾರ, ಸುಖ, ದುಃಖ ಎಂಬ ಗುಣಗಳುಯಿರುವ ಬುದ್ದಿ ರಕ್ಷಣೆಯಿಂದ ದೂರವಾಗುತ್ತಿದೆ. ಆದುದರಿಂದ ಇಂದಿನ ಯುವ ಜನಾಂಗ ಮಾನವೀಯತೆಯ ಗುಣಗಳನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ. "ಕರುಣೆಯ ಬೆಳಕು ಎಂದನು ಬುದ್ಧ ಕರುಣೆಯಿಲ್ಲದ ಜಗದ ಅಂತ್ಯವು ಸಿದ್ಧ" ಎಂದು ಬುದ್ಧ ಬಹುಹಿಂದೆ ಹೇಳಿದ ಒಂದು ಮಾತಾಗಿದೆ. ಕರುಣೆ ಮತ್ತು ಮಾನವೀಯತೆ ಜಗತ್ತಿಗೆ ಸಾರಿದ್ದಾನೆ.ಹಿಂದಿನ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗುವ ಸುದ್ದಿಗಳು ಗಮನಿಸಿದರೆ ಮೈ ನಡುಗತೊಡಗುತ್ತದೆ. ಕೊಲೆ,ಸುಳಿಗೆ ,ವಂಚನೆ ಮೊದಲಾದವುಗಳು ಸೇರಿದಂತೆ ಸಮಾಜ ಘಟನೆ ನಡೆಯುತ್ತದೆ. ಹೆಣ್ಣು ಮಕ್ಕಳು ತಮ್ಮ ಮಾನ ರಕ್ಷಣೆಗೆ ಸಾಹಸ ಪಡಬೇಕಾಗಿದೆ .

"ಬೆಳೆಯುಸಿರಿ ಮೊಳಕೆಯಲ್ಲಿ "ಎನ್ನುವ ಗಾದೆ ಮಾತಿನಂತೆ ಮಗು ಯಾವ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುತ್ತದೆ ಹಾಗೂ ಅವರು ಯಾವುದರಲ್ಲಿ ಹುಷಾರಾಗಿರುತ್ತಾರೆ ಎಂಬುದನ್ನು ಗುರುತಿಸಿ ಆತನಿಗೆ ಬೇಕಾದ ಕೌಷಲಗಳನ್ನು ಒದಗಿಸಿ ದಕ್ಷನಾಗುವಂತೆ ಮಾಡಬೇಕು . ಕ್ಯಾಂಕ್ ಹುಡುಗ ಬದುಕಲು ಮಾತ್ರ ಆರಿಯ ಎನ್ನುವಂತೆ ಹಲವರು ಮಾನವೀಯತೆಯನ್ನು ದೂರ ಮಾಡಿ ಸ್ವಾರ್ಥಿಗಳಾಗಿ ಜೀವನ ಸಾಗಿಸುತ್ತಾರೆ. ಜೀವನ ಮತ್ತು ಸಮಷ್ಠಿ ಜೀವನ ಸುಖಶಾಂತಿಯಿಂದ ಕೂಡಿರಬೇಕಿದ್ದರೆ ಮೊದಲು ಮಕ್ಕಳನ್ನು ಆ ರೀತಿಯಲ್ಲಿ ಸಿದ್ಧಗೊಳಿಸಬೇಕು.

ನಾವು ವಿಷದ ಬೀಜವನ್ನು ಹಾಕಿದರೆ ವಿಷದ ಫಲವನ್ನು ಪಡೆಯುತ್ತೆವೆ  ಹಾಗೆಯೇ ಅಮೃತವನ್ನು ಪಡೆಯುತ್ತೆವೆ ವಿಷದ ಸಸಿ ನೆಟ್ಟು ಅಮೃತ ದ ಫಲವನ್ನು ಸಾಧ್ಯವಿಲ್ಲ.

ಇನ್ನಾದರೂ ನಾವು ಎಚ್ಚೆತ್ತು ಕೊಳ್ಳೋಣ ನಮ್ಮ ಯುವ ಜನಾಂಗವನ್ನು ಹಣದ ಹಾಸರಾಗಿ ಮಾಡುವುದು ಬೇಡ ಹುಟ್ಟಿಸಿದ ತಂದೆ ತಾಯಿಯರು  ವೃದ್ಧ ಸದನದಲ್ಲಿ ಬಂಧಿಗಳಾಗುವುದು ಬೇಡ ತಮ್ಮ ಯುವತಲೆಮಾರನು ಮಾನವರಾಗಿ ಹೃದಯಮತರಾಗಿ ಬೆಳೆಸೋಣ.

ಅಕ್ಷತ.ಜಿ

# ಯೋಧ



ದೇಶವ ಕಾಯುವ ವೀರ ಯೋಧನು
ಚಳಿ ಮಳೆಯೆನ್ನದೆ ದುಡಿಯುವನು |
ಮಾಡುವನೆಲ್ಲರ ರಕ್ಷಣೆಯನು
ಕಾಪಾಡುವ ದೇಶದ ಗೌರವವನು ||

ಹೆಂಡತಿ ಮನೆ ಮಕ್ಕಳನಗಲುವನು
ದೇಶಕ್ಕಾಗಿಯೇ ಮಿಡುಯುವನು |
ಅನ್ಯದೇಶೀಯರ ಆಕ್ರಮಣವನು
ಸಹಿಸದೆ ಕಿಚ್ಚೆದೆಯಿಂದಲಿ ಮುನ್ನುಗ್ಗುವನು ||



ಕೃಷ್ಣಪ್ರಿಯ.ಯನ್

# ವರ್ಷಧಾರೆ

ಬೇಸಗೆ  ಕಾಲವು  ಕೊನೆಯಾದೊಡನೆ
ಮಳೆರಾಯನ ಅಬ್ಬರ ಶುರುವಾಯ್ತು |
ಕೆರೆ ಕಟ್ಟಗಲಲಳ ನೀರದು ತುಂಬಿ
ಗಿಡ ಮರ ಹಸಿರನು ಪಡೆದಾಯ್ತು ||



ಬಾನನು ನೋಡುತ ಮಳೆಯನು ಕಾಯುವ
ರೈತನ ಮನಕೆ ಖುಷಿಯಾಯ್ತು |
ನವೋಲ್ಲಾಸದಿ ಖಗಮೃಗವೆಲ್ಲವೂ

ತಮ್ಮ ಗೂಡನು ಮತ್ತೆ ಸೇರಿತು ||
ಕೊಡೆಯಿಂದುದುರಿವ ಮುತ್ತಿನ ಹನಿಗಳ
ಹಿಡಿಯುವ ಆಸೆಯು ನನಗಾಯ್ತು |
ಕೊಳದಲಿ ತುಂಬಿದ ನೀರಲಿ ಆಡಲು
ಅಮ್ಮನ ಬೈಗುಳ ಶುರುವಾಯ್ತು ||



ಈ ಮಳೆರಾಯನು ದೇವರ  ಸೃಷ್ಟಿಗೆ
ಹೊಸ ಹುರುಪನು ಕೊಟ್ಟಾಯ್ತು |
ಗುಡುಗಿನ ಅಬ್ಬರ ಜೋರಾದೊಡನೆ
ನನಗದು ತುಂಬಾ ಭಯವಾಯ್ತು ||


ಕೃಷ್ಣಪ್ರಿಯ.ಯನ್




# ಲಾಲ್ ಬಹದ್ದೂರ್ ಶಾಸ್ತ್ರೀ

## ಜೀವನ

- ಲಾಲ್ ಬಹಾದುರ್ ಮೊಘಲ್ ಸಾರಾಯ್‌ನಲ್ಲಿ ಜನಿಸಿದ್ದು. ೧೯೨೧ರಲ್ಲಿ ಮಹಾತ್ಮ ಗಾಂಧಿಯವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಇವರು ತಮ್ಮ ಓದನ್ನು ಅರ್ಧದಲ್ಲೇ ಬಿಟ್ಟರು. ೧೯೨೬ ರಲ್ಲಿ ಇವರಿಗೆ ಶಾಸ್ತ್ರಿ ಎಂಬ ಬಿರುದು ಕಾಶಿ ವಿದ್ಯಾಪೀಠದಲ್ಲಿ ಕೊಡಲ್ಪಟ್ಟಿತು. ಒಟ್ಟು ೯ ವರ್ಷಗಳ ಕಾಲ ಸ್ವಾತಂತ್ರ್ಯ ಕ್ಕಾಗಿ ಕಾರಾಗೃಹವಾಸ ಅನುಭವಿಸಿದ ಇವರು ಸತ್ಯಾಗ್ರಹ ಚಳುವಳಿ ಪ್ರಾರಂಭವಾದ ನಂತರ ೧೯೪೬ ರವರೆಗೂ ಜೈಲು ಶಿಕ್ಷೆ ಅನುಭವಿಸಿದರು.






- ಗಾಂಧೀಜಿಯವರ ಜನ್ಮದಿನದಂದೇ ಜನ್ಮದಿನ.

## ಭಾರತ ಸರಕಾರಕ್ಕೆ ಸಲ್ಲಿಸಿದ ಸೇವೆ


- ಸ್ವಾತಂತ್ರ ದೊರಕಿದ ಬಳಿಕ ಇವರು ಗೋವಿಂದ ವಲ್ಲಬ್ ಪಂತ್ ಅವರ ಸರಕಾರದಲ್ಲಿ ಪೋಲಿಸ್ ಖಾತೆಯನ್ನು ವಹಿಸಿಕೊಂಡಿದ್ದರು. ೧೯೫೧ರಲ್ಲಿ ಇವರು ಲೋಕಸಭೆಗೆ ಜನರಲ್ ಸೆಕ್ರೆಟರಿ ಆಗಿ ಆಯ್ಕೆಯಾದರು. ಇದರ ಪರ್ಯಾಯ ಇವರು ರೈಲ್ವೆ ಖಾತೆಯನ್ನು ವಹಿಸಿಕೊಂಡಿದ್ದೂ ಉಂಟು.
- ಅರಿಯಳೂರು ಬಳಿ ಆದ ರೈಲ್ವೆ ದುರಂತದ ತರುವಾಯ ಇವರು ತಮ್ಮ ಖಾತೆಗೆ ರಾಜೆನಾಮೆ ನೀಡಿದರು. ಮತ್ತೊಮ್ಮೆ ಇವರು ಕ್ಯಾಬಿನೆಟ್‌ಗೆ ಮರಳಿದರು. ಮೊದಲು ಸಾರಿಗೆ ಮಂತ್ರಿ ಯಾಗಿ, ಬಳಿಕ ೧೯೬೧ರಲ್ಲಿ ಗೃಹ ಮಂತ್ರಿಯಾಗಿದ್ದರು. ಮೇ ೨೭, ೧೯೬೪ರಂದು ಜವಹರ್ ಲಾಲ್ ನೆಹರು ತಮ್ಮ ಕಾರ್ಯಕಾಲದಲ್ಲಿ ಸಾವನ್ನಪ್ಪಿದರು.
- ಸ್ವಲ್ಪ ಮಟ್ಟಿಗೆ ಖಾಲಿ ಖಾಲಿಯಾದ ರಾಜಕೀಯ ರಂಗವನ್ನು ಬಿಟ್ಟು ಅಗಲಿದ್ದರು. ಕಾಂಗ್ರೆಸ್‌ನ ಕೆಲವು ಪ್ರಮುಖ ಆಸ್ತಿಗಳಿಗೆ ತಮಗೆ ಬೇಕಾದ ಬೆಂಬಲ ಸಿಗದ ಕಾರಣ ತುಂಬಾ ಸರಳ ಅಧಿಕಾರ ದಾಹಿಯೇ ಅಲ್ಲದ ಶಾಸ್ತ್ರಿಗಳಿಗೆ ಪ್ರಧಾನಿಯಾಗಲು ಅವಕಾಶ ಸಿಕ್ಕಿತು. ಇವರು ಅದೇ ವರ್ಷ ಜೂನ್ ೯ ರಂದು ಭಾರತದ ಪ್ರಧಾನಿಯಾದರು.

## ಪ್ರಧಾನಿಯಾಗಿ ಲಾಲ್ ಬಹಾದುರ್ ಶಾಸ್ತ್ರಿಗಳು

- ಆಗಿನ ಪ್ರಮುಖ ಸಮಸ್ಯೆ ಪಾಕಿಸ್ತನವಾಗಿತ್ತು.ಕಚ್ ನಡೆದ ಯುದ್ಧ ಯುಎನ್ ಮಧ್ಯಸ್ಥಿಕೆಯಿಂದ ನಿಂತು ಜಮ್ಮು-b ಕಾಶ್ಮೀರದಲ್ಲಿ ಮತ್ತೊಮ್ಮೆ ಪ್ರಾರಂಭವಾಯಿತು. ಎರಡನೇ ಭಾರತ್ ಪಾಕ್ ಯುದ್ಧ ಪ್ರಾರಂಭವಾಗಿ ಭಾರತದ ಪಡೆ ಲಾಹೋರ್ ತಲುಪುತ್ತಲೇ ಶಾಂತಿ ಒಪ್ಪಂದ ಮಾಡಿ ಕೊಳ್ಳಲಾಯಿತು.
- ಜನವರಿ ೧೯೬೬ರಲ್ಲಿ ಶಾಸ್ತ್ರಿ ಮತ್ತು ಮಹಮ್ಮದ್ ಅಯೂಬ್ ಖಾನ್ ಟಾಶ್ಕೆಂಟ್ ಡಿಕ್ಲೇರೇಶನ್
- ಮರುದಿನವೇ ಅವರು ಹೃದಯಾಘಾತದಿಂದ ಸಾವನ್ನಪ್ಪಿದರು; ಆದರೆ ಪಾಕಿಸ್ತಾನದವರೇ ಅವರ ಊಟದಲ್ಲಿ ವಿಷವನ್ನು ಹಾಕಿ ಕೊಂದರು ಎಂಬ ಊಹೆ ಇದೆ. ಆದರೆ ಅದನ್ನು ಅಲ್ಲಿಯ ವೈದ್ಯರು ದೃಡಪಡಿಸಿಲ್ಲ.
- ಇವರು ಕಾರ್ಯಕಾಲದಲ್ಲಿ ದೇಶದಾಚೆ ಸಾವನ್ನಪ್ಪಿದ ಏಕೈಕ ಭಾರತದ ಪ್ರಧಾನ ಮಂತ್ರಿ ಹಾಗು ಈ ತರಹದ ದುರಂತಕ್ಕೆ ತುತ್ತಾದ ಇತಿಹಾಸದ ಬಹುಶಃ ಕೆಲವೇ ಕೆಲವು ಸರಕಾರದ ಮುಖ್ಯಸ್ಥರಲ್ಲಿ ಒಬ್ಬರು.

By
SUCHITHA
ANUSHREE

**CHAITHRA**




# ಪಿ-38 ಪ್ರೋಟೀನು

ಸ್ಪೇನ್ ದೇಶದಲ್ಲಿನ ಸೆಂಟರ್ ಫಾರ್ ಕಾರ್ಡಿಯೋ ವ್ಯಾಸ್ಕ್ಯೂಲರ್ ರಿಸರ್ಚ್

ಸಂಸ್ಥೆಯಲ್ಲಿ ನ ಗ್ವಾಡಾವೂಪ್ ಹಾಗೂ ಬಾರ್ಬರ ಗೋಂಝೂಲೆ ಝುರಿನ್ ಎಂಬ ಸಂಶೋಧಕರಿಬ್ಬರು ಪಿ-೩ ಗಾಮಾ ಹಾಗೂ ಪಿ-೩೮ ಡೆಲ್ಟಾ ಎಂಬೆರಡು ಪ್ರೋಟೀನುಗಳನ್ನು ಶೋಧಿಸಿದ್ದಾರೆ.ಇವುಗಳ ಸವಿಸ್ತಾರ ಮಾಹಿತಿಯನ್ನು 'ನೇಚರ್ ಕಮ್ಯುನಿಕೇಶನ್ ' ಎಂಬ ನಿಯತಕಾಲಿಕದಲ್ಲಿ ಪ್ರಕಟಿಸಿದ್ದಾರೆ.ಅಧಿಕ ರಕ್ತದೊತ್ತಡ ,ಅಧಿಕ ವ್ಯಾಯಾಮ ,ಬೊಜ್ಜು ಇತ್ಯಾದಿಗಳಿಂದ ಹೃದಯದ ಮೇಲೆ ಒತ್ತಡ ಬೀಳುತ್ತದೆ.ಇದಕ್ಕೆ ವೈದ್ಯಕೀಯ ಭಾಷೆಯಲ್ಲಿ 'ಪ್ಯಾಥಾಜಿಕಲ್ ಹೈಪರ್ ಸ್ಟ್ರಾಫಿ' ಎನ್ನುತ್ತಾರೆ .ಈ ಪರಿಸ್ಥಿತಿ ಯು ಹೆಚ್ಚು ಕಾಲ ಊಳಿದರೆ ಹೃದಯ ಸ್ಟ್ರೋಕ್ ಬರುವ ಶಕ್ಯತೆ ಅಧಿಕ .ಇದರಿಂದ ಪಾರಾಗುವುದು ಅತ್ಯವಶ್ಯ.ಇದಕ್ಕಾಗಿ ಮೇಲ್ಕಾಸಿದ ಪ್ರೋಟೀನು ಗಳು ಇದನ್ನು ಸಾಧಿಸಬಲ್ಲವೆಂಬುದನ್ನು ಸಂಶೋಧಕರ ಅಭಿಪ್ರಾಯವು!

ಸಂಗ್ರಹ

THANK YOU .....for Watchin g....